ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ, ೨೨ನೇ ಮಾರ್ಚ್ ೧೯೯೫, ಫಾಲ್ಗುಣ, ಶಕ ೧೯೧೬

ಸದನವು ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧.೧೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : **ಶ್ರೀ ರಮೇಶ್ ಕುಮಾರ್** ಅವರು ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ಹುಬ್ಬಳ್ಳಿಯಲ್ಲಿ ನಡೆದ ಗೋಲಿಬಾರ್

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೋತ್ತರ ಕಾಲಕ್ಕಿಂತ ಮುಂಚೆ ಹುಬ್ಬಳ್ಳಿಯಲ್ಲಿ ನಡೆದಿರುವ ಗೋಲಿಬಾರ್‌ನ ಬಗ್ಗೆ ಬಹಳ ತೀವ್ರವಾದಂಥ ಕಳಕಳಿಯನ್ನು ವ್ಯಕ್ತಪಡಿಸುತ್ತಿದ್ದೇನೆ. ಇದು ವಿನಾಕಾರಣವಾಗಿ ಗೋಲಿಬಾರ್ ಮಾಡಿ ಅಲ್ಲಿ ಇಲ್ಲಿ ಅನ್ಯಾಯ ಮಾಡತಕ್ಕಂಥದ್ದೇ' ಪೋಲೀಸ್‌ನವರ ವರ್ತನೆಯಾದರೆ ಏನು ನಡೆದಿದೆ, ಅಲ್ಲಿ ನಡೆಯುವುದಕ್ಕೆ ಮುಂಚೆ ಯಾವ ರೀತಿ ಎಚ್ಚರ ವಹಿಸಬೇಕಾಗಿತ್ತು, ಎಲ್ಲವನ್ನು ಒಂದು ಕಡೆಯಿಂದ.....

ಅಧ್ಯಕ್ಷರು : ಈಗ ಪ್ರಶ್ನೋತ್ತರ.

ಶ್ರೀ ವಾಟಾಳ್ ನಾಗರಾಜ್ : ನಾನು ಒಪ್ಪುತ್ತೇನೆ. ಅಲ್ಲಿ ಗೋಲಿಬಾರ್ ನಡೆದಿರುವುದು ಅಕ್ಷಮ್ಯ ಅಪರಾಧ. ಇದರ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು.

ಅಧ್ಯಕ್ಷರು : ಇದನ್ನು ಪ್ರಶ್ನೋತ್ತರ ಅದಮೇಲೆ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ಈ ರೀತಿ ಗೋಲಿಬಾರ್ ಮಾಡುವ ರೀತಿಯಲ್ಲಿ ಹೋಗಬಾರದು. ಇವತ್ತು ಅವರು ಏನು ಹೇಳುತ್ತಿದ್ದಾರೆ, ಮೊದಲು ಲಾಠಿ ಛಾರ್ಜ್ ಮಾಡಿದೆವು, ಆಮೇಲೆ ಟಿಯರ್ ಗ್ಯಾಸ್, ಆಮೇಲೆ ಗೋಲಿಬಾರ್ ಎಂದು ಈ ರೀತಿ ಹೇಳುತ್ತಿದ್ದಾರೆ. ಅಂದರೆ ಮುಂದೆ ಉತ್ತರ ಕೊಡಬೇಕಾದ್ದು ಈಗಲೇ ಪ್ರಾರಂಭ ಮಾಡಿದ್ದಾರೆ. ಇದರಿಂದ ನನಗೆ ಬಹಳ ನೋವಾಗಿದೆ. ಆದ್ದರಿಂದ ಈ ಪೋಲೀಸ್ ವರ್ತನೆಯನ್ನು ಮತ್ತು ನಮ್ಮ ಸರ್ಕಾರದ ಪೋಲೀಸ್‌ರ ನೀತಿಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ. ಗೋಲಿಬಾರ್ ಮಾಡಿ ಜನಗಳನ್ನು ಕೊಲ್ಲುವುದು ಏನು ನೀತಿ ಇದು? ಇದು ಸರಿಯಲ್ಲ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು.)

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಆ ವಿಷಯದ ಮೇಲೆ ಮಾತನಾಡಬೇಕು. ಇದು ಬಹಳ ಮುಖ್ಯವಾದ ವಿಷಯವಾಗಿದೆ.

ಅಧ್ಯಕ್ಷರು : ಪ್ರಶ್ನೋತ್ತರ ಆಗಲಿ.

(ಗೊಂದಲ)